ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ ಮಾನವಿ

ಸಿಸಿ ನಂ**. 98/2023**

ಪಿರ್ಯಾದಿದಾರರು : ಪೋಲಿಸ್ ಸಿರವಾರ

ವಿರುದ್ದ

ಆರೋಪಿ ನಂ**. 1)** ಮಂಜುನಾಥ**,**
**2)** ಮಹೇಶ**,**
**3)** ವಿಜಯಲಕ್ಷ್ಮಿ**,**
**4)** ಸಿದ್ದಮ್ಮ**,**
ಎಲ್ಲರೂ ಕಲ್ಲೂರು ನಿವಾಸಿಗಳು**.**

ದೋಷಾರೋಪಣೆ

ನಾನು ಶಿವರಾಜ. ವಿ. ಸಿದ್ದೇಶ್ವರ ಬಿ.ಎಸ್ಸಿ, ಬಿ.ಎಡ್., ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಾನವಿ , ನಿಮ್ಮ ಮೇಲೆ ಮಾಡುವ ದೋಷಾರೋಪಣಿ ಮಾಡುವುದೇನೆಂದರೆ:-

ದಿ: 09-03-2020 ರಂದು ಬೆ-7-30 ಗಂಟೆಗೆ ಆರೋಪಿತರಾದ ನಿಮ್ಮ ಮನೆಯ ಮುಂದಿನ ರಸ್ತೆಯ ಮೇಲೆ ಚಾಸಾ-4 ಹೋಗುತ್ತಿದ್ದಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-4 ರವರನ್ನು ಅಕ್ರಮವಾಗಿ ಮುಂದೆ ಹೋಗದಂತೆ ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ**. 341** ಸಹಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು**,** ಚಾಸಾ**-4** ಮತ್ತು **5** ರವರಿಗೆ ಸಮಾನ ಉದ್ದೇಶದಿಂದ ಕೈಯಿಂದ ಹೊಡೆದಿದ್ದು ಆ ಮೂಲಕ ಆರೋಪಿತರಾದ ನೀವು, ಭಾರತೀಯ ದಂಡ ಸಂಹಿತೆಯ ಕಲಂ**. 323** ಸಹಕಲಂ

**34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು**,** ಚಾಸಾ**-4** ರವರಿಗೆ ಸಮಾನ ಉದ್ದೇಶದಿಂದ ಹಲ್ಲೆ ಮಾಡಿದ್ದು **1** ಮತ್ತು **2** ನೇ ಆರೋಪಿತರು ಕಟ್ಟಿಗೆ ಮತ್ತು ರಾಡಿನಿಂದ ಚಾಸಾ**-4** ಮತ್ತು **5** ರವರಿಗೆ ಹೊಡೆದು ರಕ್ತಗಾಯ ಮಾಡಿದ್ದು ಆ ಮೂಲಕ ಆರೋಪಿತರಾದ ನೀವು**,** ಭಾರತೀಯ ದಂಡ ಸಂಹಿತೆಯ ಕಲಂ**. 324** ಸಹಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು**,** ಚಾಸಾ**-4** ರವರ ಜೊತೆ ಜಗಳ ತೆಗೆದು ಚಾಸಾ**-4** ರವರಿಗೆ ಕಟ್ಟಿಗೆ ಮತ್ತು ರಾಡಿನಿಂದ ಹಾಗೂ ಚಾಸಾ**-5** ರವರಿಗೂ ಕಟ್ಟಿಗೆ ಮತ್ತು ರಾಡಿನಿಂದ ಅಂದರೆ ಮಾರಣಾಂತಿಕ ಆಯುಧಗಳಿಂದ ಹೊಡೆದು ತೀವ್ರ ಗಾಯ ಮಾಡಿದ್ದು ಆ ಮೂಲಕ ಆರೋಪಿತರಾದ ನೀವು**,** ಭಾರತೀಯ ದಂಡ ಸಂಹಿತೆಯ ಕಲಂ**. 326** ಸಹಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ**- 4** ಮತ್ತು **5** ರವರಿಗೆ ಲಂಗಾ ಸೂಳೆ ಮಕ್ಕಳೆ ನಿಮ್ಮದು ಕಲ್ಲೂರಿನಲ್ಲಿ ಬಹಳ ಆಗಿದೆ ಎಂದು ಅವಾಚ್ಯ ಶಬ್ದದಿಂದ ಬೈದು ಮತ್ತು ಅವರ ಶಾಂತತೆಗೆ ಭಂಗವನ್ನುಂಟು ಮಾಡಿದ್ದು**,** ಆ ಮೂಲಕ**,** ಭಾರತೀಯ ದಂಡ ಸಂಹಿತೆಯ ಕಲಂ**. 504** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

ಮೇಲೆ ಹೇಳಿದ ದಿನಾಂಕ**,** ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ**-4** ಮತ್ತು **5** ರವರಿಗೆ ಜೀವಬೆದರಿಕೆ ಹಾಕಿದ್ದು**,** ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ**. 506** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಅಂತಾ ದೋಷಾರೋಪಣೆಯನ್ನು ಮಾಡಲಾಗಿದೆ**.**

(ಈ ಮೂಲಕ ಮೇಲೆ ಹೇಳಿದ ಅಪರಾಧಗಳ ವಿಚಾರಣೆಗೆ ಗುರಿಯಾಗತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

ಹಿರಿಯ ಸಿವಿಲ್ ಮತ್ತು ಪ್ರ.ದ. ಗಳು ಮಾನವಿ.

ದಿನಾಂಕ :-24-04-2026

## **1** ನೇ ಆರೋಪಿಯ ಉತ್ತರ

ಪ್ರಶ್ನೆ 1) ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?

ಉತ್ತರ:- ತಿಳಿಯಿತು.

ಪ್ರಶ್ನೆ:- 2) ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ:- ವಿಚಾರಣೆ ಆಗಬೇಕು.

(ಈ ಮೇಲಿನಂತೆ ದೋಷಾರೋಪಣೆಗಳನ್ನು ಓದಿ ಹೇಳಿ ಆರೋಪಿಗಳು ನೀಡಿದ ಉತ್ತರಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ.)

ದಿಃ 24-04-2026.

ಹಿರಿಯ ಸಿವಿಲ್ ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಗಳು
ಮಾನವಿ.

## **2** ನೇ ಆರೋಪಿಯ ಉತ್ತರ

ಪ್ರಶ್ನೆ 1) ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?

ಉತ್ತರ:- ತಿಳಿಯಿತು.

ಪ್ರಶ್ನೆ:- 2) ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ:- ವಿಚಾರಣೆ ಆಗಬೇಕು.

(ಈ ಮೇಲಿನಂತೆ ದೋಷಾರೋಪಣೆಗಳನ್ನು ಓದಿ ಹೇಳಿ ಆರೋಪಿಗಳು ನೀಡಿದ ಉತ್ತರಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ.)

ದಿಃ 24-04-2026.

ಹಿರಿಯ ಸಿವಿಲ್ ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಗಳು
ಮಾನವಿ.

**3** ನೇ ಆರೋಪಿಯ ಉತ್ತರ

ಪ್ರಶ್ನೆ 1) ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?

ಉತ್ತರ:- ತಿಳಿಯಿತು.

ಪ್ರಶ್ನೆ:- 2) ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ:- ವಿಚಾರಣೆ ಆಗಬೇಕು.

(ಈ ಮೇಲಿನಂತೆ ದೋಷಾರೋಪಣೆಗಳನ್ನು ಓದಿ ಹೇಳಿ ಆರೋಪಿಗಳು ನೀಡಿದ ಉತ್ತರಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ.)

ದಿ: 24-04-2026.

ಹಿರಿಯ ಸಿವಿಲ್ ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಗಳು
ಮಾನವಿ.

**4** ನೇ ಆರೋಪಿಯ ಉತ್ತರ

ಪ್ರಶ್ನೆ 1) ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?

ಉತ್ತರ:- ತಿಳಿಯಿತು.

ಪ್ರಶ್ನೆ:- 2) ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ:- ವಿಚಾರಣೆ ಆಗಬೇಕು.

(ಈ ಮೇಲಿನಂತೆ ದೋಷಾರೋಪಣೆಗಳನ್ನು ಓದಿ ಹೇಳಿ ಆರೋಪಿಗಳು ನೀಡಿದ ಉತ್ತರಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ.)

ದಿ: 24-04-2026.

ಹಿರಿಯ ಸಿವಿಲ್ ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಗಳು
ಮಾನವಿ.